(ಉ) ಗೇರುಬೀಜದ ಪರಿಷ್ಕರಣ ಘಟಕಗಳ ಕುರಿತು.

+ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ 100ಕ್ಕಿಂತ ಜಾಸ್ತಿ ಗೇರುಬೀಜ ಪರಿಷ್ಕರಣ ಘಟಕಗಳು ಇವೆ. ಸುಮಾರು 24 ಸಾವಿರ ಕುಟುಂಬಗಳು ಇದರ ಮೇಲೆ ಅವಲಂಬಿತವಾಗಿದೆ. ಸುಮಾರು 35 ಸಾವಿರಕ್ಕಿಂತ ಜಾಸ್ತಿ ಕಾರ್ಮಿಕರು ಇವತ್ತು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ಒಂದು ತಪ್ಪು ನಿಟ್ಟಿನಿಂದ ಇಡೀ ಉದ್ಯಮ ಇವತ್ತು ಅಪಾಯಕ್ಕೆ ಈಡಾಗಿದೆ ಹಾಗೂ ಅಲ್ಲಿ ಗಂಭೀರವಾದಂತಹ ಪರಿಸ್ಥಿತಿ ಉಂಟಾಗಿದೆ. ಇಲ್ಲಿ ಏನಾಗಿದೆ? ಒಂದೇ ಗೇರುಬೀಜದ ಮೇಲೆ ಎರಡು ಏಜೆನ್ಸಿ ಸೆಸ್ ಹಾಕುವಂತಹದು - ಸರ್ಕಾರ ತಪ್ಪುನಿಟ್ಟ್‌ನ್ನು ಹಾಕಿದೆ. ಕರ್ನಲ್ ಮೇಲೆ ಬೇರೆ, ಅದರ ಮೇಲೆ ಇಡಿಯಾಗಿ ಗೇರು ಬೀಜದ ಮೇಲೆ ಸೆಸ್ ಈ ತರಹ ಎರಡು ಸೆಸ್ ಅನ್ನು ಹಾಕಿರುವುದರಿಂದ ಈ ಸಮಸ್ಯೆ ಉದ್ಭವ ಆಗಿದೆ. ಇವತ್ತು 35 ಸಾವಿರ ಟನ್ ಉತ್ಪನ್ನ ನಮ್ಮ ರಾಜ್ಯದಲ್ಲಿ ಆಗುವುದಿದ್ದರೆ 60 ಸಾವಿರ ಟನ್‌ಗಿಂತ ಜಾಸ್ತಿಯಾಗಿ ಗೇರುಬೀಜ ಪರಿಷ್ಕರಣ ಆಗುತ್ತಿದೆ. ಸುಮಾರು 25 ಸಾವಿರ ಟನ್ ಆಮದನ್ನು ಮಾಡಿ ಕಳುಹಿಸುತ್ತಿದ್ದಾರೆ. ಈಗ ಉತ್ಪತ್ತಿ ಆದುದರ ಮೇಲೆ ಏಜೆನ್ಸಿ ಸೆಸ್ ಹಾಕಿದರೆ ಅದಕ್ಕೆ ಅರ್ಥ ಇದೆ. ಆದರೆ ಆಮದು ಆಗಿರುವಂತಹ ಕರ್ನಲ್ ಮೇಲೆ, ಗೇರು ಬೀಜದ ಮೇಲೂ ಕೂಡ ಸೆಸ್ ಹಾಕಿರುವಂಥಹದ್ದು ಸರಿಯಲ್ಲ. ಅದೇ ರೀತಿ ಎಕ್ಸ್‌ಪೋರ್ಟ್ ವ್ಯವಹಾರಕ್ಕೆ, ರಫ್ತು ಉದ್ಯಮಕ್ಕೆ, ಅದಕ್ಕೆ ಯಾವುದೇ ಸೆಸ್ ಬರುವುದಿಲ್ಲ. ಅದರ ಮೇಲೆ ಕೂಡ ಸೆಸ್ ವಿಧಿಸಿರುವಂತಹದು ಇದೆ.

12. 10 ಪಿ.ಎಂ.

ಇಂಟರ್‌ಸ್ಟೇಟ್ ಟ್ರೇಡಿಂಗ್ ಮೇಲೂ ಸೆಸ್ ವಿಧಿಸಿರುವುದು ನಿಜವಾದ ತಪ್ಪು ನೀತಿ. ಇದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕೆನ್ನುವ ವಿನಂತಿಯನ್ನು ನಾನುತಮ್ಮ ಮೂಲಕ ಮಾಡುತ್ತಿದ್ದೇನೆ. ಇಷ್ಟುಮಾತ್ರವಲ್ಲ, ಮೊನ್ನೆ ದಿವಸ ಆಕಸ್ಮಿಕವಾಗಿ ಮಧ್ಯರಾತ್ರಿ ಒಂದೂವರೆ ಗಂಟೆ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸನ್ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಎಸ್.ಪಿ.ಯವರು ಎಪಿಎಂಸಿ ಸೆಕ್ರೆಟರಿಯವರ ಜೊತೆಯಲ್ಲಿ ರಾತ್ರೋರಾತ್ರಿ ಅಲ್ಲಿಗೆ ಹೋಗಿ ಕೆಲವು ಡಬ್ಬಿಗಳನ್ನು ಸೀಜ್ ಮಾಡಿಕೊಂಡು ಬಂದಿದ್ದಾರೆ. ನಾನು ಕೇಳುವಂಥದ್ದು ಏನೆಂದರೆ ಬೇರೆ ಎಲ್ಲ ಎಕ್ಸ್‌ಸ್‌ನಲ್ಲಿ ಕೋಟಿಗಟ್ಟಲೆ ಹಣ ಬಾಕಿ ಇದೆ, ಅದರ ಬಗ್ಗೆ ಇವರು ಕಾರ್ಯಾಚರಣೆಯನ್ನು ಮಾಡಿದರೆ ಅದು ಅರ್ಥಪೂರ್ಣವಾಗುತ್ತದೆ. ಆದರೆ ಸುಪ್ರೀಂ ಕೋರ್ಟಿನಲ್ಲಿ ಒಂದು ಅಪೀಲು ಕೂಡ ಇರುವಾಗ, ಅದರ ಮೇಲೆ ಒಂದು ಹಿಯರಿಂಗನ್ನು ಕೂಡ ಮಾಡದೆ ಮತ್ತು ಮುಖ್ಯ ಕಾರ್ಯದರ್ಶಿಗಳ ಮಟ್ಟದಲ್ಲಿ ಕರ್‌ಸ್ಪಾಂಡೆನ್ಸ್ ಸ್ಟೇಟ್‌ನಲ್ಲಿರುವಾಗ ಯಾವುದೇ ರೀತಿಯಲ್ಲಿ ಅದನ್ನು ಕೇಳದೆ ಈ ರೀತಿ ಆಕಸ್ಮಿಕವಾಗಿ ಸೀಜ್‌ಮಾಡಿರುವುದು ದೊಡ್ಡ ಆಘಾತ ಎಂದು ನಾನು ಹೇಳುತ್ತೇನೆ. ತಮ್ಮಲ್ಲಿ ನಾನು ಒಂದು ವಿನಂತಿ ಮಾಡುವುದೇನೆಂದರೆ, ಇದರ ಬಗ್ಗೆ ತಕ್ಷಣವೇ ಎಪಿಎಂಸಿ ಮಂತ್ರಿಗಳು, ಇಲ್ಲಿರುವ ಎಪಿಎಂಸಿ ಕಾರ್ಯದರ್ಶಿಗಳನ್ನು, ಫೈನಾನ್ಸ್

ಸೆಕ್ರೆಟರಿಯವರನ್ನು, ಇಂಟಸ್ಟ್ರಿಯಲ್ ಸೆಕ್ರೆಟರಿ, ಮತ್ತು ಮುಖ್ಯ ಕಾರ್ಯದರ್ಶಿಗಳನ್ನು ಕರೆಸಿ, ಈ ಅಸೋಸಿಯೇಷನ್‌ನವರನ್ನೂ ಕೂಡ ಕರೆಸಿ ಇದರ ಬಗ್ಗೆ ಯಾವ ರೀತಿ ಪರಿಹಾರ ಕೊಡಬೇಕೆಂದು ಹೇಳುವ ಬಗ್ಗೆ ನೀತಿಯನ್ನು ಪುನರ್‌ವಿಮರ್ಶೆ ಮಾಡಬೇಕೆಂದು ತಮ್ಮ ಮೂಲಕ ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

+ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಈ ಗೋಡಂಬಿ ಬಡವರ ಬೆಳೆ. ಆದರೆ ಅದು ಶ್ರೀಮಂತರ ಆಹಾರ. ಈ ರಾಜ್ಯಕ್ಕೆ ಸಾಕಷ್ಟು ಆದಾಯವನ್ನು ಕೊಡುವ ಬೆಳೆ. ಕೋಸ್ಟಲ್ ಲೈನ್‌ನಲ್ಲಿ ಸಾಕಷ್ಟು ಈ ಬೆಳೆಯನ್ನು ಬೆಳೆಯುತ್ತಿದ್ದಾರೆ. ಶಿವಮೊಗ್ಗ,ದಕ್ಷಿಣ ಕನ್ನಡ ಉತ್ತರ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಇದರ ಬೆಳೆ ಇದೆ. ಇದನ್ನು ಪ್ರೋಸೆಸಿಂಗ್ ಮಾಡುವ ಯಾನಿಟ್‌ಗಳು ಇವತ್ತು ಕೇರಳ ಮತ್ತು ತಮಿಳುನಾಡಿನಲ್ಲಿದ್ದರೂ ಕೂಡ ಇತ್ತೀಚೆಗೆ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸಾಕಷ್ಟು ಇದ್ದಾವೆ. ಇತ್ತೀಚೆಗೆ ಅದು ಸಾಕಾಗುವುದಿಲ್ಲವೆಂದು ಹೇಳಿ ಹೊರ ದೇಶಗಳಿಂದಲೂ ಕೂಡ ಅಮದು ಮಾಡಿಕೊಂಡು ರಾ-ನಟ್ಸ್‌ನ್ನು ಪ್ರೊಸೆಸ್ ಮಾಡುತ್ತಿದ್ದಾರೆ. ಇದು ವಿಶೇಷವಾಗಿ ಸುಮಾರು 25 ಸಾವಿರ ಮಹಿಳೆಯರಿಗೆ ಉದ್ಯೋಗವನ್ನು ಕೊಟ್ಟಿರುವಂತಹ ಒಂದು ಇಂಡಸ್ಟ್ರಿ, ಪಲ್ಯೂಷನ್ ಫ್ರೀಯಾಗಿರುವಂತಹ ಇಂಡಸ್ಟ್ರಿ, ವಿದ್ಯುತ್ತನ್ನು ಕೇಳದೆ ಇರುವಂತಹ ಒಂದು ಇಂಡಸ್ಟ್ರೀ. ಈ ಇಂಡಸ್ಟ್ರೀ, ಯಾವುದೇ ಕಾರಣಕ್ಕಾದರೂ ನಿಂತು ಹೋದರೆ ದೊಡ್ಡ ಆಘಾತವಾಗುತ್ತದೆ. ಸರ್ಕಾರದ ಬೊಕ್ಕಸಕ್ಕೆ ಮತ್ತು ಬೆಳೆಗಾರರ ಮೇಲೆ ಮತ್ತು ಕಾರ್ಮಿಕರ ಮೇಲೆ ಹಾನಿಯಾಗುತ್ತದೆ. ಈ ದೃಷ್ಟಿಯಿಂದ ಕಳೆದಸಾರಿ ಈ ಎಪಿಎಂಸಿ ಸೆಸ್‌ನ್ನು ಕೊಡುವ ದೃಷ್ಟಿಯಿಂದ ಹಿಂದಿನ ಸರ್ಕಾರದ ಕಾಲದಲ್ಲಿ ಕೂಡ ಒಂದು ಸಾರಿ ರೈಡ್ ಮಾಡಿದಾಗ ನಾವು ಅದರ ಬಗ್ಗೆ ಮಾತನಾಡಿದ್ದೆವು. ಅಲ್ಲಿಯ ಫ್ಯಾಕ್ಟರಿ ಓನರ್ಸ್ ಮತ್ತು ನಾವುಗಳು ಹೋಗಿ ಹಿಂದಿನ ಎಪಿಎಂಸಿ ಮಂತ್ರಿಗಳ ಹತ್ತಿರ ಮಾತನಾಡಿ ಅದನ್ನು ತಡೆಹಿಡಿಸಿದ್ದೆವು. ಆದರೆ ಈಗಲೂ ಕೂಡ ಮಾನ್ಯ ಮಂತ್ರಿಗಳು ಇದರ ಬಗ್ಗೆ ಅಧಿಕಾರಿಗಳನ್ನು ಕರೆಸಿ ಚರ್ಚೆ ಮಾಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಎಕ್ಸ್‌ಪೋರ್ಟ್ ಕರ್ನಲ್ಸ್‌ನ ಆಧಾರದ ಮೇಲೆ ಗೋಡಂಬಿಯ ತಿರುಳೇನಿದೆ ಅದನ್ನು ಎಕ್ಸ್‌ಪೋರ್ಟ್ ಮಾಡುವುದರಲ್ಲಿ ವಿನಾಯಿತಿ ಇದೆ. ರಾ-ನಟ್ಸ್ ಮೇಲೆ ಎಲ್ಲಾ ರೀತಿಯಿಂದ ಅವರು ಮಾರ್ಕೆಟ್ ಸೆಸ್‌ನ್ನು ಪ್ರಾಮಾಣಿಕವಾಗಿ ಕೊಡುತ್ತಿದ್ದಾರೆ. ಆದರೆ ಎಕ್ಸ್‌ಪೋರ್ಟ್ ಮಾಡುವುದರ ಮೇಲೆ ವಿನಾಯಿತಿ ಇದ್ದಾಗ್ಯೂ ಕೂಡ, ಕೇಂದ್ರ ಸರ್ಕಾರ ವಿನಾಯಿತಿಯನ್ನು ಕೊಟ್ಟರೂ ಕೂಡ ನಮ್ಮ ಸರ್ಕಾರದ ತಪ್ಪು ನೀತಿಯಿಂದಾಗಿ ಅಧಿಕಾರಿಗಳು ಮತ್ತೆ ಮತ್ತೆ ಹೋಗಿ ಅದರ ಮೇಲೆ ರೇಡ್ ಮಾಡುವಂಥಾದ್ದು ಮತ್ತೆ ಅದರ ವಸೂಲಿ ಕಡಡಾಯ ಮಾಡತಕ್ಕಂಥದ್ದನ್ನು ಇವತ್ತು ಅಧಿಕಾರಿಗಳು ಮಾಡುತ್ತಿದ್ದಾರೆ. ಮತ್ತು ಇಲ್ಲಿ 4 ಪರ್‌ಸೆಂಟ್ ಟ್ಯಾಕ್ಸ್ ಇದೆ. ಕೇರಳ ಮತ್ತು ಗೋವಾ ರಾಜ್ಯಗಳಲ್ಲಿ 2 ಪರ್‌ಸೆಂಟ್ ಇದೆ. ಹೀಗಾಗಿ ಕಾಂಪಿಟಷನ್ ಮಾಡುವುದು ಕೂಡ ಕಷ್ಟವಾಗಿದೆ. ಇದರಿಂದಾಗಿ ಅಲ್ಲಿ ಎಪಿಎಂಸಿ ಸೆಸ್ ಇಲ್ಲ ಹೀಗಾಗಿ ನಮ್ಮ ಬೆಳೆಗಾರರಿಗೆ

ಮತ್ತು ಫ್ಯಾಕ್ಟರಿ ಮಾಲೀಕರಿಗೆ ತುಂಬಾ ದೊಡ್ಡ ಹೊಡೆತ ಬಿಳುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದನ್ನು ಮಾರ್ಕೆಟ್ ಮಾಡುವುದು ಕೂಡ ತುಂಬಾ ಕಷ್ಟವಾಗುತ್ತದೆ. ಈ ರೀತಿ ರಾತ್ರೋರಾತ್ರಿ ಅಧಿಕಾರಿಗಳು ಹೋಗಿ ನುಗ್ಗುವುದು ಸರಿಯಲ್ಲ. ಇದಕ್ಕೆ ಕಾರಣವೆಂದರೆ ಗೋಡಂಬಿ ಫ್ಯಾಕ್ಟರಿಯೆಂದರೆ ಅದು ಚಿನ್ನತ ಗಣಿ ಎಂತಲೇ ತಿಳಿದುಕೊಂಡು ಕೆಲವು ಅಧಿಕಾರಿಗಳು ವ್ಯವಸ್ಥಿತವಾಗಿ ಅವರನ್ನು ಕರೆಸಿ ಅವರಿಂದೇನಾದರೂ ಬರುತ್ತದೋ ಏನೋ ಎನ್ನುವ ದೃಷ್ಟಿಯಿಂದ ಪ್ರಯತ್ನ ಮಾಡಿದರು. ಆದರೆ ದಕ್ಷಿಣ ಕನ್ನಡದ ಜನರು ಸ್ವಲ್ಪ ಚುರುಕು ಸ್ವಭಾವದವರು ಕಾನೂನಿನ ಭಾಗದಲ್ಲಿ ಯೋಚನೆ ಮಾಡುವ ಜನಗಳು ಅವರು. ಹಾಗಾಗಿ ಈ ರೀತಿ ಇವರುಗಳಿಗೆ ಬಗ್ಗದಿದ್ದಾಗ ಅಲ್ಲಿ ಹೋಗಿ ಅವರಿಗೆ ಅವಮಾನ ಮಾಡುವುದು ಮತ್ತು ರಾಬರಿ ಮಾಡುವ ಕೆಲಸವನ್ನು ಇವತ್ತು ಅಲ್ಲಿನ ಅಧಿಕಾರಿಗಳು ಮಾಡುತ್ತಿದ್ದಾರೆ. ತತ್‌ಕ್ಷಣ ಇದನ್ನು ನಿಲ್ಲಿಸದೇ ಹೋದರೆ ತುಂಬಾ ದೊಡ್ಡ ದುಷ್ಪರಿಣಾಮವಾಗುತ್ತದೆ. ಇದರ ಬಗ್ಗೆ ಮಂಗಳೂರಿನಲ್ಲಿ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಗೋಡಂಬಿ ಫ್ಯಾಕ್ಟರಿ ಬಾಗಿಲು ಹಾಕುತ್ತೇವೆಂದು ಅವರು ಹೊರಟಿದ್ದಾರೆ. ಹೀಗಾದರೆ ಸುಮಾರು 25-30 ಸಾವಿರ ಜನ ಮಹಿಳೆಯರು ಬೀದಿಗೆ ಬರತಕ್ಕ ಸಂದರ್ಭಗಳು ಇವೆ. 40 ಸಾವಿರ ಮಹಿಳಾ ಕಾರ್ಮಿಕರು ಇದರಲ್ಲಿದ್ದಾರೆ. ಇದು ಹುಡುಗಾಟಿಕೆಯ ಪ್ರಶ್ನೆಯಲ್ಲ. ದಯವಿಟ್ಟು ಮಾನ್ಯ ಸಚಿವರು ಈ ತಪ್ಪು ನೀತಿಯನ್ನು ಸರಪಡಿಸಬೇಕು. ಆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ಫ್ಯಾಕ್ಟರಿ ಮಾಲಿಕರುಗಳನ್ನು ಕರೆಸಿ ಇದರ ಬಗ್ಗೆ ಇರುವ ತಪ್ಪು ಭಾವನೆಯನ್ನು ಹೋಗಲಾಡಿಸಿ ಸುಗಮವಾಗಿ ಇಂಡಸ್ಟ್ರೀ ನಡೆಯುವ ಹಾಗೆ ತಕ್ಕ ವ್ಯವಸ್ಥೆ ಮಾಡಿ ಕೊಡಬೇಕೆಂದು ನಾನು ತಮ್ಮ ಮೂಲಕ ನಾನು ಅವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಕೆ.ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೇ, ಮೊನ್ನೆ ತಾನೆ ಈ ಗೇರುಬೀಜ ಫ್ಯಾಕ್ಟರಿಗೆ ಸುಮಾರು ಆರು ಗಂಟೆಗೆ ಹೋಗಿ ಸ್ವಲ್ಪ ಕಾಂಪ್ರೊಮೈಸ್ ಮಾಡಿ ಮತ್ತೆಪುನಃ ರಾತ್ರಿ 12 ಗಂಟೆಗೆ ಪೋಲೀಸ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತೆ ಎಪಿಎಂಸಿ.ಯವರು ಹೋಗಿ ರೈಡ್ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ನಾನು ಆಗಲೇ ಫೋನ್ ಮುಖಾಂತರ ವಿನಂತಿಸಿಕೊಂಡೆ. ಏನಾದರೂ ಟ್ಯಾಕ್ಸ್ ಕಟ್ಟುವುದು ಬಾಕಿಯೇನಾದರೂ ಇದ್ದರೆ ಆ ಬಗ್ಗೆ ನಾವು ಕುಳಿತುಕೊಂಡು ಮಾತನಾಡೋಣ. ಟ್ಯಾಕ್ಸ್ ಬಾಕಿ ಇರುವ ಬಗ್ಗೆ ಅದು ಕೋರ್ಟಿನಲ್ಲಿದೆ. ಇದರಿಂದಾಗಿ ಅನೇಕ ಕಾರ್ಮಿಕರಿಗೆ ಅಲ್ಲಿ ತೊಂದರೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಹೆಂಚಿನ ಉದ್ಯಮ ಸಂಪೂರ್ಣವಾಗಿ ಮುಚ್ಚಿ ಹೋಗಿದೆ. ಬೀಡಿ ಉದ್ದಿಮೆಯೂ ಮುಚ್ಚಿ ಹೋಗಿದೆ. ಈ ಒಂದು ಕಾರ್ಖಾನೆ ಮಾತ್ರ ಸ್ವಲ್ಪ ನಡೆಯುತ್ತಿದೆ. ಇದರಲ್ಲಿ ಅನೇಕರು ಬಡವರು ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಇದು ಬಹಳ ಬೇಸರದ ಸಂಗತಿ, ಈ ರೀತಿ ರಾತ್ರಿ 12 ಗಂಟೆ 1 ಗಂಟೆಗೆ ಹೋಗಿ ರೈಡ್ ಮಾಡಿ ಕಾರ್ಮಿಕರಿಗೆ ತೊಂದರೆ ಮಾಡುವುದು ಬಹಳ ತಪ್ಪು. ಇದನ್ನು ಆದಷ್ಟು ಬೇಗ ಸರಿ ಮಾಡಿ ಕೊಡಬೇಕೆಂದು

ನಾನು ಮಾನ್ಯ ಮಂತ್ರಿಯವರಲ್ಲಿ ವಿನಂತಿಸುತ್ತಿದ್ದೇನೆ.

ಶ್ರೀ ಆರ್. ಬಿ. ತಿಮ್ಮಾಪುರ್ (ಮಾನ್ಯ ಕೃಷಿಮಾರುಕಟ್ಟೆ ಸಚಿವರು): ಮಾನ್ಯ ಅಧ್ಯಕ್ಷರೇ, ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಪ್ರದೇಶದಲ್ಲಿ ಅಧಿಸೂಚಿತ ಕೃಷಿ ಉತ್ಪನ್ನವಾದ ಗೋಡಂಬಿ ತಿರುಳಿನ ಮೇಲೆ ವರ್ತಕರು, ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ಅಧಿನಿಯಮ - 1966ರ ಪ್ರಕಾರ ನಿಯಮ 65ರ ಮೇರೆಗೆ ಶೇ. 1 ರಷ್ಟು ಮಾರುಕಟ್ಟೆ ಶುಲ್ಕವನ್ನು ತುಂಬಬೇಕಾಗಿತ್ತು. ವರ್ತಕರು ಮಾರುಕಟ್ಟೆ ಶುಲ್ಕ ತುಂಬುವುದರ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿಗಳು ಮಾರುಕಟ್ಟೆ ಸಮಿತಿಯ ಪರವಾಗಿ ಇತ್ಯರ್ಥವಾಗಿರುತ್ತವೆ. ವರ್ತಕರು, ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿಕೊಂಡಿರುತ್ತಾರೆ. ಸರ್ವೋಚ್ಚ ನ್ಯಾಯಾಲಯವು ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ತಡೆಯಾಜ್ಞೆ ನೀಡಿರುವುದಿಲ್ಲ. ರಾಜ್ಯ ಉಚ್ಚ-ನ್ಯಾಯಾಲಯದಲ್ಲಿ ತೀರ್ಮಾನವಾಗಿರುವಂತೆ ಗೋಡಂಬಿತಿರುಳಿನ ವರ್ತಕರು, ಮಂಗಳೂರು ಮಾರುಕಟ್ಟೆ ಸಮಿತಿಗೆ 3 ಕೋಟಿ 76 ಲಕ್ಷ ರೂಪಾಯಿಗಳು ಬಾಕಿ ಇದ್ದು, ಸದರಿ ಬಾಕಿಯನ್ನು ಮಾರುಕಟ್ಟೆ ಸಮಿತಿಗೆ ತುಂಬಬೇಕೆಂದು ಹಲವಾರು ಸಲ ನೋಟೀಸ್‌ಗಳನ್ನು ನೀಡಿದ್ದರೂ ಸಹಾ ವರ್ತಕರು ಶುಲ್ಕವನ್ನು ತುಂಬದೆ ಇರುವ ಪ್ರಯುಕ್ತ ಸದರಿ ವರ್ತಕರಿಂದ ಶುಲ್ಕವನ್ನು ವಸೂಲಿ ಮಾಡಲು ಕಾಯ್ದೆ ಮೇರೆಗೆ ಕ್ರಮಗಳನ್ನು ಜರುಗಿಸಲು ಸಮಿತಿಯ ಕಾರ್ಯದರ್ಶಿಗಳು ದಿ: 24-4-2000 ದಂದು ಕಲ್ಪಾವಿ ಕ್ಯಾಷ್ಯೂ ಇಂಡಸ್ಟ್ರೀ ಹಾಗೂ ಅಚಲ್ ಇಂಡಸ್ಟ್ರೀ ಕಾರ್ಖಾನೆಗೆ ಮಧ್ಯಾಹ್ನ ಸುಮಾರು 12-30ಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಸದರಿಯವರು ತುಂಬಬೇಕಾದ ಮಾರುಕಟ್ಟೆ ಶುಲ್ಕಕ್ಕೆ ಸಮಾನವಾದ ಗೋಡಂಬಿ ಉತ್ಪನ್ನವನ್ನು ಜಪ್ತಿ ಮಾಡಲು ಕ್ರಮಗಳನ್ನು ಜರುಗಿಸಿರುತ್ತಾರೆ. ಈ ಹಂತದಲ್ಲಿ ಅಚಲ್ ಇಂಡಸ್ಟ್ರೀ ಕಾರ್ಖಾನೆ ಮಾಲೀಕರು ಮತ್ತೆ ಕೆಲಸಗಾರರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಗಳನ್ನು ಮತ್ತು ಸಿಬ್ಬಂದಿಯನ್ನು ತನ್ನ ಕರ್ತವ್ಯವನ್ನು ನಿರ್ವಹಿಸದಂತೆ ತಡೆದು ಸುಮಾರು ರಾತ್ರಿ 12 ಗಂಟೆಯವರೆಗೆ ದಿಗ್ಬಂಧನದಲ್ಲಿ ಇಟ್ಟಿರುವುದಾಗಿ ತಿಳಿದು ಬಂದಿರುತ್ತದೆ. ಮಾರುಕಟ್ಟೆ ಸಮತಿಯ ಅಧಿಕಾರಿಗಳನ್ನು ಕರ್ತವ್ಯ ನಿರ್ವಹಿಸಲು ತಡೆಯುಂಟು ಮಾಡಿದ ಬಗ್ಗೆ ಸಮಿತಿಯ ಕಾರ್ಯದರ್ಶಿ ದಕ್ಷಿಣ ಕನ್ನಡ ಜಿಲ್ಲೆ, ಜಿಲ್ಲಾಧಿಕಾರಿಗಳಿಗೆ ಮತ್ತೆ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಸುದ್ದಿಯನ್ನು ಮುಟ್ಟಿಸಿದ ತರುವಾಯ ಸದರಿ ಅಧಿಕಾರಿಗಳು ಕಾರ್ಖಾನೆಗೆ ಭೇಟಿ ನೀಡಿ ದಿಗ್ಬಂಧನದಲ್ಲಿ ಇಟ್ಟ ಸಮಿತಿಯ ಅಧಿಕಾರಿಗಳನ್ನು ಬಿಡಿಸಿ ಕಾನೂನು ಮೇರೆಗೆ ಕ್ರಮ ಜರುಗಿಸಿರುತ್ತಾರೆ. ಮೆ: ಅಚಲ್ ಇಂಡಸ್ಟ್ರೀ ಇವರು ಸಮಿತಿಗೆ ತುಂಬಬೇಕಾದ ಶುಲ್ಕವನ್ನು ವಸೂಲು ಮಾಡಲು ಮಾರುಕಟ್ಟೆ ಸಮಿತಿಯ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಜರುಗಿಸಿದ ಹಿನ್ನೆಲೆಯಲ್ಲಿ ಸದರಿ ವರ್ತಕರು ಸಮಿತಿಯ ಅಧಿಕಾರಿಯ ವಿರುದ್ಧ ಸತ್ಯಕ್ಕೆ ದೂರವಾದ ಆಪಾದನೆಗಳನ್ನು ಮಾಡಿದ್ದಾರೆ.

ಪ್ರಸ್ತುತ ವಿಷಯವು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಮುಂದೆ ಇದ್ದು ಈ ಹಂತದಲ್ಲಿ ಯಾವುದೇ ತೀರ್ಮಾನವನ್ನು ಕೈಗೊಳ್ಳುವುದಕ್ಕೆ ಸರ್ಕಾರಕ್ಕೆ ಕಷ್ಟವಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ರೆಕಾರ್ಡ್ ಸ್ಟ್ರೈಟ್ ಮಾಡುವ ದೃಷ್ಟಿಯಿಂದ ದಿಗ್ಬಂಧನ ಹಾಕಿದ್ದಾರೆ ಎನ್ನುವ ತಪ್ಪು ಮಾಹಿತಿಯನ್ನು ಈ ಸಭೆಗೆ ಒದಗಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು: ಇದರ ಬಗ್ಗೆ ಬೇರೆ ನೋಟೀಸನ್ನು ಕೊಡಿ. ಅದರ ಮೆರಿಟ್ ಮೇಲೆ ನಾನು ಕನ್‌ಸಿಡರ್ ಮಾಡುತ್ತೇನೆ

(ಗೊಂದಲ)

ಶ್ರೀ ಕೆ.ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೇ, ಕೋರ್ಟಿನಲ್ಲಿ ಕೇಸು ಪೆಂಡಿಂಗ್ ಇರುವಾಗ ಇವರು ಹೋಗಬಾರದಾಗಿತ್ತು. ಇವರ ಡ್ಯೂ ಜಾಸ್ತಿ ಇದೆ ಎಂದು ಅಲ್ಲಿಂದ ಮೂರು-ನಾಲ್ಕು ಲಕ್ಷ ರೂಪಾಯಿಗಳ ಗೋಡಂಬಿಯನ್ನು ತಂದಿದ್ದಾರೆ, ಇದರಿಂದ ಇವರ ಹಣವನ್ನು ಸಂಪೂರ್ಣವಾಗಿ ವಸೂಲಿ ಮಾಡಿದ ಹಾಗೆ ಆಗುವುದಿಲ್ಲ. ಈ ಮಧ್ಯದಲ್ಲಿ ನಾನು ಸಂಬಂಧಪಟ್ಟವರನ್ನು ಭೇಟಿ ಮಾಡಿ, ಏನಾದರೂ ಮಾತನಾಡಿ ಅದನ್ನು ಇತ್ಯರ್ಥ ಮಾಡಿ ಎಂದರೆ ಪೋಲೀಸ್‌ನವರು ಹೋಗಿ ಅಟ್ಯಾಕ್ ಮಾಡಿದ್ದಾರೆ.

(ಗೊಂದಲ)

ಶ್ರೀ ಆರ್.ಬಿ.ತಿಮ್ಮಾಪುರ್: ಮಾನ್ಯ ಅಧ್ಯಕ್ಷರೇ ಇದು 1992 ರಿಂದ ಇರುವ ಸಮಸ್ಯೆ. ನಾವು ಹತ್ತು ಹಲವಾರು ಸಾರಿ ಅವರುಗಳಿಗೆ ನೋಟೀಸ್‌ಗಳನ್ನು ಕೊಟ್ಟು ಅದನ್ನು ಬಗೆಹರಿಸಲು ಎರಡು-ಮೂರು ಸಲ ಅವರನ್ನು ಕರೆದು ಮಾತನಾಡಿರುವುದೂ ಆಗಿದೆ. ಅವರು ಸುಪ್ರೀಂಕೋರ್ಟಿಗೆ ಅಪೀಲು ಹೋದ ತಕ್ಷಣವೇ ಹೈಕೋರ್ಟ್ ಆದೇಶವನ್ನು ಪಾಲಿಸಲೇಬಾರದು ಎಂದೇನಿಲ್ಲ. ಹೈಕೋರ್ಟಿನವರು ನೀವು ಮಾಡಿದ್ದು ಸರಿ ಇದೆ ಎಂದು ಹೇಳಿದ ರೀತಿಯಿಂದಾಗಿ ನಾವು ವಸೂಲು ಮಾಡುವ ಕೆಲಸಗಳನ್ನು ಕೈಗೊಂಡಿದ್ದೇವೆ. ಆದರೆ ಒಮ್ಮೆಲೇ ನೀವು ಒಟ್ಟು ತುಂಬಿಕೊಳ್ಳುವುದಕ್ಕಾಗುವುದಿಲ್ಲ ಎಂದು ಏನಾದರೂ ಹೇಳಿದರೆ ಹಂತ ಹಂತವಾಗಿ ತುಂಬಿಕೊಳ್ಳುವುದಕ್ಕೆ ನಾವು ಏನಾದರೂ ವ್ಯವಸ್ಥೆ ಮಾಡೋಣ. ಆ ರೀತಿಯಲ್ಲಿ ನಾವೇನಾದರೂ ಶಾಸಕರು ಮತ್ತು ಅಧಿಕಾರಿಗಳ ಜೊತೆ ಚರ್ಚೆಮಾಡಿ ಹಂತ ಹಂತವಾಗಿ ತುಂಬಿಕೊಳ್ಳುವ ಕೆಲಸ ಮಾಡುವುದಕ್ಕಾಗುತ್ತದೆಯೇ ವಿನಹಾ ಅದನ್ನು ಪೂರ್ತಿ ಬಿಟ್ಟುಬಿಡಲಿಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಕೆ.ವಿಜಯಕುಮಾರ ಶೆಟ್ಟಿ: ಅದನ್ನು ಬಿಡಬೇಕೆಂದು ನಾವು ಕೇಳುವುದಿಲ್ಲ. ಅದನ್ನು ನಾವು ಕುಳಿತು ಮಾತನಾಡಿ ಇತ್ಯರ್ಥ ಮಾಡೋಣ. ಟ್ಯಾಕ್ಸ್ ಅಥವಾ ರೆವಿನ್ಯೂ ಸರ್ಕಾರಕ್ಕೆ ಏನು ಬಾಕಿ ಇದೆಯೋ ಅದನ್ನು ಖಂಡಿತವಾಗಿಯೂ ಕೂಡ ಕೊಡಲೇಬೇಕು. ಆ ಬಗ್ಗೆ ಮಾನ್ಯ ಮಂತ್ರಿಗಳು ಕುಳಿತು ಮಾತನಾಡಿ ಇತ್ಯರ್ಥಪಡಿಸಲಿ. ಅಲ್ಲಿ ಅನೇಕ ಲೇಬರ್ಸ್ ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಲೇಬರ್ ಉದ್ದಿಮೆಗಳೂ ಮುಚ್ಚಿ ಹೋಗಿವೆ. ಅಲ್ಲಿ ಇರುವಂಥದ್ದು ಕೇವಲ ಕ್ಯಾಶಿಯೋ ಇಂಡಸ್ಟ್ರಿ ಮಾತ್ರ. ಇದಕ್ಕೂ ನೀವು ಹೀಗೆ ಮಾಡಿದರೆ ಹೇಗೆ?

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾದಂತಹ ವಿಷಯದ ಬಗ್ಗೆ ದೀರ್ಘ ಚರ್ಚೆಗೆ ನಾನು ಅವಕಾಶ ಮಾಡಿಕೊಡುವುದಿಲ್ಲ. ದಯವಿಟ್ಟು ಕ್ಷಮಿಸಿ, ತಾವು ಬೇಕಾದರೆ ಈ ಬಗ್ಗೆ ಮತ್ತೊಂದು ನೋಟೀಸ್ ಕೊಡಿ. ಅದನ್ನು ನಾನು ಮೆರಿಟ್ ಮೇಲೆ ಪರಿಗಣಿಸುತ್ತೇನೆ.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಒಂದು ಕಡೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡಿದ್ದಾರೆ. ಆದರೆ ಗೇರುಬೀಜ ಬೆಳೆಯುವಂತಹ ರೈತನಿಗೆ ತೊಂದರೆ ಕೊಟ್ಟರೆ ಹೇಗೆ? ರೈತನಿಗೆ ಏನಾದರೂ ಒಂದು ತೊಂದರೆ ಆಗುತ್ತಲೇ ಇರುತ್ತದೆ. ಮಾನ್ಯ ಅಧ್ಯಕ್ಷರೂ ಕೂಡ ಗೇರುಬೀಜ ಬೆಳೆದಂತಹ ರೈತರೇ ಆಗಿದ್ದಾರೆ. ತಾವೂ ಕೂಡ ನಮ್ಮ ರಕ್ಷಣೆಗೆ ಒರದಿದ್ದರೆ ಇನ್ಯಾರು ನಮ್ಮ ರಕ್ಷಣೆಗೆ ಬರುತ್ತಾರೆ?

ಅಧ್ಯಕ್ಷರು: ಅದರ ಬಗ್ಗೆ ಬೇರೆ ನೋಟೀಸ್ ಕೊಡಿ. ಅದನ್ನು ನಾನು ಮೆರಿಟ್ ಮೇಲೆ ಪರಿಗಣಿಸುತ್ತೇನೆ. ಆ ವಿಷಯದ ಬಗ್ಗೆ ಮತ್ತೆ ಇಲ್ಲಿ ಮಾತನಾಡಬೇಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಈ ಸರ್ಕಾರ 'ವಸೂಲಿ ಸರ್ಕಾರ' ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಆಶ್ರಯ ಬಾಕಿಯನ್ನು ವಸೂಲು ಮಾಡುತ್ತಿದ್ದೀರಿ, ಸಾಲವನ್ನು ವಸೂಲಿ ಮಾಡುತ್ತಿದ್ದೀರಿ,ಹೀಗೆ ಎಲ್ಲಾ ವಸೂಲಿ ಮಾಡುತ್ತಿದ್ದೀರಿ. ದಯವಿಟ್ಟು ಅವರ ಸಹಾಯಕ್ಕೆ ಬನ್ನಿ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೇ, ಈಗ ಆ ಪ್ರಶ್ನೆ ಬೇಕಾಗಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು 'ವಸೂಲಿ ಸರ್ಕಾರ' ಎಂದು ವ್ಯಂಗ್ಯವಾಗಿ ಹೇಳಿದರೋ ಅಥವಾ ಇನ್ಯಾವ ದೃಷ್ಟಿಯಿಂದ ಹೇಳಿದರೋ ಏನೋ ಅದು ನನಗೆ ಗೊತ್ತಾಗಲಿಲ್ಲ. ಬಹುಶಃ ಆ ವಸೂಲಿಯ ಅನುಭವ ಮಾನ್ಯ ಸಿಂಧ್ಯಾರವರ ಸರ್ಕಾರಕ್ಕೆ ಇತ್ತೇನೋ ಎಂದು ನನಗನ್ನಿಸುತ್ತಿದೆ.

ಶ್ರೀ ಕೆ.ಪಿ.ಸುಬ್ಬಾರೆಡ್ಡಿ: ಅವರ ಸರ್ಕಾರ ಕೊಟ್ಟಿದ್ದನ್ನು ತಾವು ವಸೂಲಿ ಮಾಡುತ್ತಿದ್ದೀರಿ. ಅದರಲ್ಲೇನೂ ತಪ್ಪಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕೇಂದ್ರ ಸರ್ಕಾರದವರಿಗೆ ಏನೇನು ಕೊಡಬೇಕೋ ಅದನ್ನು ವಸೂಲಿ ಮಾಡಿಕೊಡಿ ಎಂದು ನೀವು ಹೇಳಿದ್ದರಿಂದ ಅದನ್ನು ವಸೂಲು ಮಾಡಲು ನಾವು ಎನ್‌ಫೋರ್ಸ್ ಮಾಡುತ್ತಿದ್ದೇವೆ ಅಷ್ಟೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಮಂತ್ರಿಗಳು 'ವಸೂಲಿ' ಎಂಬ ಪದದ ಬಗ್ಗೆ ಯಾವ ರೀತಿಯಲ್ಲಿ ಅರ್ಥ ಮಾಡಿಕೊಂಡರೋ ಗೊತ್ತಿಲ್ಲ. 'ವಸೂಲಿ' ಎಂದರೆ ಇನ್ನೊಬ್ಬರ ಪರವಾಗಿ ಬೆದರಿಸಿಕೊಂಡು ಮಾತನಾಡುವವರು ಎಂಬ ಅರ್ಥವೂ ಕೂಡ ಇದೆ. ಮಾನ್ಯ ಸಿಂಧ್ಯಾರವರು ಆ ಅರ್ಥದಲ್ಲಿ ಹೇಳಿರಬಹುದು.

ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂತಹ ವಿಷಯ ಈ ಉದ್ಯಮದಲ್ಲಿ 30-40 ಸಾವಿರ ಜನ ಮಹಿಳೆಯರಿದ್ದಾರೆ. ಇದು ಅವರ ಜೀವನದ ಪ್ರಶ್ನೆಯಾಗಿದೆ. ಈ ವ್ಯಾಪಾರ ಮಾಡುವವರು ಗೌರವಸ್ಥರಾಗಿದ್ದಾರೆ. ಕೋರ್ಟ್‌ನಲ್ಲಿ ಕೇಸ್ ಇನ್ನೂ ನಡೆಯುತ್ತಿದೆ. ಅವರ ಜೊತೆಗೆ ಗೌರವಯುತವಾಗಿ ಸರ್ಕಾರ ಮಾತನಾಡಲಿ ಅವರನ್ನು ದರೋಡೆ ಮಾಡಿದವರಂತೆ ಇಲಾಖೆಯವರು ಆ ರೀತಿ ದಾಳಿ ಮಾಡುವುದು ಸರಿಯೇ?.....

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಒಮ್ಮೆ ಅಲ್ಲಿಗೆ ಹೋಗಿ 'ಅಲ್ಲಿ ಏನು ನಡೆದಿದೆ ಎಂಬುದನ್ನು ವಿಚಾರ ಮಾಡಿಕೊಂಡು ಬನ್ನಿ.

ಶ್ರೀ ಆರ್.ಬಿ.ತಿಮ್ಮಾಪುರ: ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರುಗಳು ಇಲ್ಲಿ ವ್ಯಕ್ತಪಡಿಸಿದ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ನಾನು ಈ ವಿಷಯದ ಬಗ್ಗೆ ಅಧಿಕಾರಿ ಮಿತ್ರರನ್ನು ಕರೆಸಿ ಮಾತನಾಡತಕ್ಕ ಕೆಲಸವನ್ನು ಮಾಡುತ್ತೇನೆ.

ಅಧ್ಯಕ್ಷರು: ನಿಯಮ 69ರ ಮೇಲಿನ ವಿಷಯದ ಚರ್ಚೆಯನ್ನು ಮಧ್ಯಾಹ್ನ ತೆಗೆದುಕೊಳ್ಳೋಣ. ಈಗ ಗಮನ ಸೆಳೆಯುವ ಸೂಚನೆಯೊಂದಿದೆ, ಅದನ್ನು ಈಗ ಕೈಗೆತ್ತಿಕೊಳ್ಳೋಣ.